# Press Coverage’s of Training cum Demonstration

on Biocontrol Strategies for Management of Invasive Whiteflies in Coconut held on 21 February, 2023 at Hosadurga, Chitradurga district, Karnataka in collaboration with ICAR- Krishi Vigyan Kendra, Chitradurga District and Department of Agriculture, Chitradurga district, Government of Karnataka.

**Newspaper: Kannada Prabha**

**Date: 25.02.2023**

**Language: Kannada**

## ಸಾಣೇಹಳ್ಳಿಯಲ್ಲಿ ಜೈವಿಕ ಅಣುಗಳ ಬಳಕೆ ಪ್ರಾತ್ಯಕ್ಷಿಕೆ

### ಅಧಿಕಾರಿಗಳು, ವಿಜ್ಞಾನಿಗಳ ತಂಡದಿಂದ ಮಾಹಿತಿ ಸಾಣೇಹಳ್ಳಿಯ ಪಂಡಿತಾರಾಧ್ಯ ಶ್ರೀಗಳ ಉಪಸ್ಥಿತಿ



ಸಾಣೇಹಳ್ಳಿಯಲ್ಲಿ ತೆಂಗಿನ ಬೆಳೆಯಲ್ಲಿ ಬಿಳಿನೊಣದ ಬಾಧೆ ತಡೆಗಟ್ಟುವ ಜೈವಿಕ ಅಣುಗಳ ಬಳಕೆ ಬಗ್ಗೆ ತಾಂತ್ರಿಕ ಮಾಹಿತಿ ಮತ್ತು ಪ್ರಾತ್ಯಕ್ಷಿಕೆ ನೀಡಲಾಯಿತು.

• **ಕನ್ನಡಪ್ರಭ ವಾರ್ತೆ** ಹೊಸದುರ್ಗ

ತಾಲೂಕಿನಾದ್ಯಂತ ತೆಂಗಿನ ಮರಗಳಿಗೆ ಹರಡಿರುವ ಬಿಳಿ ನೊಣದ ಬಾಧೆಗೆ ರೈತರು ಕಂಗಾಲಾಗಿದ್ದು, ಸಾಣೇಹಳ್ಳಿ ಶ್ರೀಗಳ ಸೂಚನೆಯಂತೆ ಮಠದ ತೋಟದಲ್ಲಿ ಕೃಷಿ ಇಲಾಖೆಯ ಅಧಿಕಾರಿಗಳು ಹಾಗೂ ವಿಜ್ಞಾನಿಗಳ ತಂಡ ಭೇಟಿ ನೀಡಿ, ಪರಿಹಾರ ಕ್ರಮಗಳ ಬಗ್ಗೆ ರೈತರಿಗೆ ತಾಂತ್ರಿಕ ಮಾಹಿತಿ ನೀಡಿದರು.

ಈ ವೇಳೆ ಬೆಂಗಳೂರಿನ ರಾಷ್ಟ್ರೀಯ ಕೀಟ ಸಂಪನ್ಮೂಲ ಕೇಂದ್ರ, ಹಿರಿಯ ವಿಜ್ಞಾನಿ ಡಾ.ಸೆಲ್ವರಾಜ ಮಾತನಾಡಿ, ತೆಂಗನ್ನು ಕಾಡುತ್ತಿರುವ ರೋಗೋಸ್ ಸುರುಳಿ ಬಿಳಿನೊಣ, ತೆಂಗಿನಗರಿಯ ಕೆಳಭಾಗದಲ್ಲಿ ಕುಳಿತು ಸತತವಾಗಿ ರಸ ಹೀರುವುದರಿಂದ ಗರಿಗಳು ಹಳದಿ ಬಣ್ಣಕ್ಕೆ ತಿರುಗಿ, ಗರಿಗಳ ಮೇಲ್ಭಾಗದಲ್ಲಿ ಕಪ್ಪು ಶಿಲೀಂದ್ರ ಹರಡುತ್ತವೆ ಇದರಿಂದ ಮರಗಳ ಬೆಳವಣಿಗೆ ಕುಂಠಿತವಾಗುತ್ತದೆ. ಇದರ ನಿಯಂತ್ರಣಕ್ಕೆ ಪರಾವಲಂಬಿ ಕಣಜಗಳನ್ನು ತೆಂಗಿನ ತೋಟದಲ್ಲಿ ಹಾರಿಬಿಡುವುದರಿಂದ ಬಿಳಿನೊಣದ ಹಾವಳಿ ಕಡಿಮೆಗೊಳಿಸಬಹುದು ಎಂದರು.

ಬಿಳಿನೊಣದ ಹಾವಳಿಗೆ ತುತ್ತಾಗಿರುವ ತೆಂಗಿನ ಮರದ ಗರಿಗಳಿಗೆ ಜೈವಿಕ ಶಿಲೀಂದ್ರವಾದ ಐಸರೀಯ ಫ್ಯೂಮೋಸೋರೋಸಿಯಸ್ ಶಿಲೀಂಧ್ರವನ್ನು 5ಗ್ರಾಂ 1 ಲೀಟರ್ ನೀರಿನಲ್ಲಿ ಬೆರಸಿ ಮರಗಳಿಗೆ ಸಿಂಪಡಣೆ ಮಾಡುವ ಮೂಲಕ ನಿಯಂತ್ರಿಸಬಹುದು ಎಂದು ತಿಳಿಸಿದರು.

ಈ ವೇಳೆ ಸಾಣೇಹಳ್ಳಿಯ ಪಂಡಿತಾರಾಧ್ಯ ಸ್ವಾಮೀಜಿ, ಹೊಸದುರ್ಗ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಸಿ.ಎಸ್ ಈಶ, ಕೃಷಿ ವಿಜ್ಞಾನಿಗಳಾದ ಡಾ. ಓಂಕಾರಪ್ಪ, ಸುಮಲತಾ, ಡಾ. ಸರಸ್ವತಿ, ಸಹಾಯಕ ಕೃಷಿ ಅಧಿಕಾರಿಗಳಾದ ಬಸವರಾಜ್, ಜಗದೀಶ್ ಹಾಗೂ ರೈತರು ಹಾಜರಿದ್ದರು.

## ಅಪರಿಚಿತ ವಾಹನ ಡಿಕ್ಕಿ; ಬೈಕ್ ಸವಾರ ಸಾವು

ಕನ್ನಡಪ್ರಭ Sat, 25 February 2023
https://kpepaper.asianetnews.co

Newspaper: Samyuktha Karnataka

Date: 26.02.2023

Language: Kannada

# ತೆಂಗು ಬೆಳೆಯಲ್ಲಿ ಬಿಳಿ ನೊಣದ ಬಾಧೆ ತಡೆಗಟ್ಟುವ ಜೈವಿಕ ಅಣುಗಳ ಬಳಕೆ ಬಗ್ಗೆ ತಾಂತ್ರಿಕ ಮಾಹಿತಿ ಮತ್ತು ಪ್ರಾತ್ಯಕ್ಷಿಕೆ



■ **ಚಂದ್ರವಳ್ಳಿ ನ್ಯೂಸ್, ಹೊಸದುರ್ಗ**

ಕೃಷಿ ಇಲಾಖೆ ಹೊಸದುರ್ಗ ತಾಲ್ಲೂಕು ಕೃಷಿ ವಿಜ್ಞಾನ ಕೇಂದ್ರ ಹಿರಿಯೂರು ಚಿತ್ರದುರ್ಗ ಜಿಲ್ಲೆ ಹಾಗೂ ರಾಷ್ಟ್ರೀಯ ಕೀಟ ಸಂಪನ್ಮೂಲ ಕೇಂದ್ರ ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ತಾಲ್ಲೂಕಿನ ಸಾಣೇಹಳ್ಳಿ ಗ್ರಾಮದ ಶ್ರೀ ಮಠದ ತೋಟದಲ್ಲಿ ಮಠದ ಶ್ರೀಗಳಾದ ಡಾ. ಶ್ರೀಶ್ರೀಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ಸಮ್ಮುಖದಲ್ಲಿ ಜೈವಿಕ ಅಣುಗಳನ್ನು ಬಳಸಿ ತೆಂಗಿನ ಬೆಳೆಗೆ ಬಂದಿರುವ ಬಿಳಿನೊಣದ ಬಾಧೆಯನ್ನು ನಿಯಂತ್ರಿಸುವ ಕುರಿತು ತಾಂತ್ರಿಕ ಮಾಹಿತಿ ಹಾಗೂ ಪ್ರಾತ್ಯಕ್ಷಿಕೆಯನ್ನು ರೈತರಿಗೆ ನೀಡಲಾಯಿತು.

ಕಾರ್ಯಕ್ರಮಕ್ಕೆ ಡಾ.ಸಿ ಎಸ್ ಈಶ, ಸಹಾಯಕ ಕೃಷಿ ನಿರ್ದೇಶಕರು ಹೊಸದುರ್ಗ, ಡಾ.ಸೆಲ್ವರಾಜ್ ಹಿರಿಯ ವಿಜ್ಞಾನಿ(ಐಸಿಎಆರ್-ಎನ್‌ಬಿಎಐಆರ್)ಬೆಂಗಳೂರು ಹಾಗೂ ಸುಮಲತಾ (ಐಸಿಎಆರ್), ಡಾ.ಓಂಕಾರಪ್ಪ ವಿಜ್ಞಾನಿ(ಸಸ್ಯ ಸಂರಕ್ಷಣೆ) ಕೆವಿಕೆ ಹಿರಿಯೂರು ಹಾಗೂ ಡಾ.ಸರಸ್ವತಿ ಜೆ.ಎಂ (ಗೃಹ ವಿಜ್ಞಾನ) ಕೆವಿಕೆ ಹಿರಿಯೂರು, ಶ್ರೀ ಬಸವರಾಜಪ್ಪ (ಎಎಚ್‌ಓ). ಶ್ರೀ ಜಗದೀಶ್ (ಎಎಚ್‌ಓ) ಕಸಬಾ ಹೋಬಳಿ ಇವರುಗಳು ಪ್ರಾತ್ಯಕ್ಷಿಕೆ ಹಾಗೂ ತರಬೇತಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು.



# ತೆಂಗಿನ ನೊಣ ಬಾಧೆ ತಡೆಗೆ ರೈತರಿಗೆ ಸಲಹೆ

**Newspaper: Udayavaani; Date: 26.02.2023; Language: Kannada**

**Source:** ICAR- National Bureau of Agricultural Insect Resources, Hebbal, Bengaluru-24